**ಸಿ.ಸಿ. ನಂ.: 1312/2020**

ಸಿ.ಡಬ್ಲ್ಯೂ: 6

ಪಿ.ಡಬ್ಲ್ಯೂ: 7

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ ಮಡಿವಾಳ |
| ತಂದೆ/ ಗಂಡನ ಹೆಸರು | : | ನಾರಾಯಣ ಮಡಿವಾಳ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಾಸ್ತವ್ಯ | : | ಹೊಲನಗದ್ದೆ |

(ಇಂದು ದಿಃ 14-06-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಕಂಡುಬರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 7(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 ರಿಂದ 4 ವರ್ಷಗಳ ಹಿಂದೆ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿ.ಪಿ. 7 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ 2 ಫೊಟೋಗಳನ್ನು ತೋರಿಸಲಾಗಿ ಅದರಲ್ಲಿ ತಾವು ಕಂಡುಬರುವುದಾಗಿ ಒಪ್ಪಿದ್ದು, ಸದರಿ ಫೊಟೋಗಳನ್ನು ಈಗಾಗಲೇ ನಿ.ಪಿ. 8 ಮತ್ತು 9 ಎಂದು ಗುರುತಿಸಲಾಗಿರುತ್ತದೆ. ಸದರಿ ಫೊಟೋಗಳನ್ನು ನಾನು ದಾಖಲಾತಿಗೆ ಸಹಿ ಮಾಡಿದ ಸಂದರ್ಭದಲ್ಲಿ ತೆಗೆದಿರುತ್ತಾರೆ. ಆದರೆ ಯವ ವಿಚಾರಕ್ಕಾಗಿ ಫೊಟೋಗಳನ್ನು ತೆಗೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನು ಸಹಿ ಮಾಡಿದ

**ಸಿ.ಸಿ. ನಂ.: 1312/2020**

ಸಿ.ಡಬ್ಲ್ಯೂ: 6

ಪಿ.ಡಬ್ಲ್ಯೂ: 7

ಸಂದರ್ಭದಲ್ಲಿ 3 ನೇ ಆರೋಪಿ ಇರಲಿಲ್ಲ, ಆದರೆ ಫೋಟೋ ತೆಗೆಯುವ ಸಂದರ್ಭದಲ್ಲಿ ಆತ ಹಾಜರಿದ್ದನು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 28–06–2019 ರಂದು 3 ನೇ ಆರೋಪಿಯು ದ್ವಿಚಕ್ರ ವಾಹನ ಕಳ್ಳತನ ಮಾಡಿದ ಸ್ಥಳ ಮತ್ತು ದ್ವಿಚಕ್ರ ವಾಹನವನ್ನು ನಿಲ್ಲಿಸಿದಂತಹ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸನವರು ನನ್ನ ಮತ್ತು ಚಾ.ಸಾ.7 ರವರ ಸಮಕ್ಷಮ ಮಧ್ಯಾಹ್ನ3.00 ರಿಂದ 4.30 ಗಂಟೆಯ ವರೆಗೆ ನಿ.ಪಿ. 7 ರಂತೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿಯು ವಾಹನ ಕಳುವು ಮಾಡಿದ ಹಾಗೂ ನಿಲ್ಲಿಸಿದ ಸ್ಥಳವನ್ನು ತೋರಿಸಿದ ಸಂದರ್ಭದಲ್ಲಿ ಸದ್ರಿ ಸ್ಥಳದಲ್ಲಿ ಸಹಿ ಮಾಡಿದ್ದರೂ ಸಹ ಠಾಣೆಯಲ್ಲಿ ನಿಪಿ.7 ಕ್ಕೆ ಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮದಲ್ಲಿ 3 ನೇ ಆರೋಪಿಯು ನೀಡಿದ ಮಾಹಿತಿಯ ಮೇರೆಗೆ ಪಂಚನಾಮೆಯನ್ನು ಜರುಗಿಸಿದರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 7 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ ಪಿ.ಎಸ್.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ., ಕುಮಟಾ